ಅಸಲು ದಾವೆ ನಂಃ 322/2024 ಪಿ .ಡಬ್ಲ್ಯೂಃ 1- ನೀಲಾವತಿ ಕೋ ವೀರುಪಾಕ್ಷಪ್ಪ ಆಡಿನ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 04 /04/2026 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ GRY ರವರಿಂದಃ**

ದಾವಾ ಆಸ್ತಿಯ ವಿ.ಪಿ.ಸಿ. ನಂ.543 ಪ್ರತಿವಾದಿಯವರಿಗೆ ಸೇರಿದ್ದು ಎಂದರೆ ಸಾಕ್ಷಿಯು ನಮಗೆ ಸೇರಿದ್ದು ಎಂದು ನುಡಿದಿರುತ್ತಾರೆ. ವಿ.ಪಿ.ಸಿ.ನಂ 543 ನಮಗೆ ಸೇರಿದ್ದು ಎಂದು ನನ್ನ ವಾದ ಪತ್ರದಲ್ಲಿ ಬರೆಸಿರುತ್ತೇನೆ. ವಿ.ಪಿ.ಸಿ.ನಂ 543 ರ ಪಶ್ಚಿಮಕ್ಕೆ ನನ್ನ ಹಾಗೂ ನನ್ನ ಸಹೋದರರಿಗೆ ಸೇರಿದ ವಿ.ಪಿ.ಸಿ.ನಂ 544 ಇರುತ್ತದೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ಪ್ರತಿವಾದಿಯು ದಿಃ 19.07.2024 ರಂದು ಹಿರೇಹಾಳ ಗ್ರಾಮ ಪಂಚಾಯತಿಯವರಿಂದ ಪರವಾನಗಿಯನ್ನು ಪಡೆದುಕೊಂಡು ಕಟ್ಟಡವನ್ನು ಕಟ್ಟಲು ಪ್ರಾರಂಭ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮೊದಲು ಅದಕ್ಕಿಂತ ಪೂರ್ವದಲ್ಲಿ ನಾವು ತಕರಾರು ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ ನಂತರ ಸಾಕ್ಷಿಯು ಯಾವುದೇ ಪರವಾನಗಿಯನ್ನು ಅವರು ಪಡೆದುಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ಈ ದಾವೆಯನ್ನು ಯಾವ ದಿನಾಂಕದಂದು ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯವರು ಪರವಾನಗಿಯನ್ನು ಪಡೆದುಕೊಂಡ ನಾಲ್ಕೈದು ತಿಂಗಳ ನಂತರ ನಾನು ಈ ದಾವೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ.ನನ್ನ ತಂದೆಯವರಿಗೆ ಇಬ್ಬರೂ ಹೆಂಡತಿಯರು. ನನ್ನ ತಾಯಿ ನನ್ನ ತಂದೆಯವರಿಗೆ ಎರಡನೇ ಹೆಂಡತಿ ಅವರಿಗೆ ನಾವು ಮೂರು ಜನ ಮಕ್ಕಳು. ದಾವೆ ಮಾಡುವ ಕಾಲಕ್ಕೆ ವಿಪಿಸಿ ನಂ.544 ಆಸ್ತಿಯು ನನ್ನ ಸಹೋದರನಾದ ಶಿವಪ್ಪ ಮತ್ತು ಶಂಕ್ರಪ್ಪರವರ ಹೆಸರಿಗೆ ಇತ್ತು ಎಂದರೆ ಸರಿ. ವಿಪಿಸಿ ನಂ.544 ರಲ್ಲಿ ಶಿವಪ್ಪ ಮತ್ತು ಶಂಕ್ರಪ್ಪರವರು ವಾಸವಾಗಿರುತ್ತಾರೆ. ವಿಪಿಸಿ ನಂ.544 ಮತ್ತು ವಿಪಿಸಿ ನಂ.543 ರ ಮಧ್ಯದ ಗೋಡೆ ಹುದುವಿನ ಗೋಡೆ ಎಂದರೆ ಸಾಕ್ಷಿಯು ನನ್ನ ತಂದೆಯವರು ಕಟ್ಟಿಸಿದ್ದು ಎಂದು ನುಡಿದಿರುತ್ತಾರೆ. ಈ ದಾವೆಯನ್ನು ದಾಖಲು ಮಾಡಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನನ್ನ ವಾದಪತ್ರದಲ್ಲಿ

ಬರೆಸಿರುವಂತೆ ವಿಪಿಸಿ ನಂ.544 ನೇ ಆಸ್ತಿಯನ್ನು ಹೊಂದಿಕೊಂಡು ಇರುವ ವಿಪಿಸಿ ನಂ.543ರ ಪಶ್ಚಿಮದ ಗೋಡೆ ಹುದುವಿನ ಗೋಡೆ ಎಂದು ಬರೆಸಿರುವುದು ತಪ್ಪು ತರುತ್ತದೆ. ಪ್ರತಿವಾದಿಯವರಿಗೆ ಶಿವಪ್ಪ ಮತ್ತು ಶಂಕ್ರಪ್ಪರವರು ನಮ್ಮ ಗೋಡೆಗೆ ಹಾನಿಯಾಗದ ರೀತಿಯಲ್ಲಿ ತಮ್ಮ ಗೋಡೆಯನ್ನು ಸುಲಿದುಕೊಂಡು ಕಟ್ಟಿಕೊಳ್ಳಬೇಕು ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಗ್ರಾಮ ಪಂಚಾಯತಿಯವರು ಸ್ಥಾನಿಕ ಚೌಕಾಸಿಯನ್ನು ಮಾಡಿ ಪ್ರತಿವಾದಿಯವರಿಗೆ ಮನೆಯನ್ನು ಕಟ್ಟಿಕೊಳ್ಳಲು ಪರವಾನಗಿಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾವು ಪ್ರತಿವಾದಿಯವರು ಯಾವುದೇ ಕಟ್ಟಡ ಕಾಮಗಾರಿಯನ್ನು ಮಾಡದಂತೆ ನ್ಯಾಯಾಲಯದಲ್ಲಿ ನಿರ್ಬಂಧಕಾಜ್ಞೆಯನ್ನು ಕೇಳಿದ್ದೇವು ಎಂದರೆ ಸರಿ. ನ್ಯಾಯಾಲಯವು ವಾದವನ್ನು ಆಲಿಸಿದ ನಂತರ ಮಧ್ಯಂತರ ಅರ್ಜಿಯನ್ನು ವಜಾ ಮಾಡಿರುತ್ತದೆ ಎಂದರೆ ಸಾಕ್ಷಿಯು ನಾವು ನ್ಯಾಯ ಕೇಳುತ್ತೇವೆ ಎಂದು ನುಡಿದಿರುತ್ತಾರೆ. ಮಧ್ಯಂತರ ಅರ್ಜಿ ವಜಾ ಆದ ನಂತರ ನಾವು ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ನಾನು ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ಪ್ರತಿವಾದಿಯವರು ಪರವಾನಗಿಯನ್ನು ಪಡೆದುಕೊಂಡು ಕಟ್ಟಡವನ್ನು ಪೂರ್ಣಗೊಳಿಸಿದ ನಂತರ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿ ಸದರಿ ಪೋಟೋದಲ್ಲಿ ಕಾಣುವ ಇಟ್ಟಿಗೆಯ ಗೋಡೆಯ ಪಶ್ಚಿಮ ದಿಕ್ಕಿನ ಮನೆ ನಮ್ಮದು ಎಂದರೆ ಸರಿ. ಸದರಿ ಪೋಟೋವನ್ನು ವಕೀಲರ ಕೋರಿಕೆಯ ಮೇರೆಗೆ ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಮ್ಮೆ ಪೋಟೋಗಳನ್ನು ತೋರಿಸಿ ನಿಮಗೆ ಯಾವ ಭಾಗದಲ್ಲಿ ನಷ್ಟವಾಗಿರುತ್ತದೆ ಎಂದು ತೋರಿಸಿ ಎಂದು ಕೇಳಲಾದ ಪ್ರಶ್ನೆಗೆ ಸಾಕ್ಷಿಯು ಈ ಪೋಟೋಗಳಲ್ಲಿ ಕಾಣುವುದಿಲ್ಲ ನಾವು ಹಾಜರುಪಡಿಸಿರುವ ಪೋಟೋಗಳಲ್ಲಿ ಕಾಣಿಸುತ್ತದೆ ಎಂದು ನುಡಿದಿರುತ್ತಾರೆ. ನಿಪಿ-8 ಸುಲಿದುಕೊಂಡ ಗೋಡೆಯ ಪೋಟೊ ಎಂದರೆ ಸರಿ. ನಿಪಿ-8ರಲ್ಲಿ ವಿಪಿಸಿ ನಂ.543 ಕಾಣುತ್ತಿರುವ ರೀತಿಯಲ್ಲಿ ಇಲ್ಲ ಎಂದರೆ ಸರಿ. ವಿಪಿಸಿ ನಂ.543ರಲ್ಲಿ ಪ್ರತಿವಾದಿಯವರು ಮನೆ ಕಟ್ಟಿಕೊಂಡ ನಂತರ ನಮ್ಮ ಮನೆ ಬಂದೋಬಸ್ತ ಆಗಿರುತ್ತದೆ ಎಂದರೆ ಸರಿಯಲ್ಲ.ನಮ್ಮ ಮನೆಯ ಗೋಡೆ

ಪ್ರತಿವಾದಿಯವರು ಮನೆ ಕಟ್ಟಿಕೊಂಡ ನಂತರ ಬಂದೋಬಸ್ತ ಆಗಿದ್ದರೂ ಸಹ ನಮಗೆ ನಷ್ಟವಾಗಿರುತ್ತದೆ ಎಂದು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಮಗೆ ಪ್ರತಿವಾದಿಯವರು ಮನೆ ಕಟ್ಟಿದ್ದರಿಂದ ಯಾವ ಭಾಗದಲ್ಲಿ ಎಷ್ಟು ನಷ್ಟವಾಗಿರುತ್ತದೆ ಎಂದು ಕೇಳಲಾದ ಪ್ರಶ್ನೆಗೆ ಸಾಕ್ಷಿಯು ಪಶ್ಚಿಮದ ಗೋಡೆ ಸಂಪೂರ್ಣ ಇರುವುದಿಲ್ಲ. ಸದರಿ ಗೋಡೆಯಿಂದ ನಮ್ಮ ಮನೆ ಬಿದ್ದಿರುತ್ತದೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ನಮ್ಮ ಗೋಡೆ ಬಿದ್ದಿರುತ್ತದೆ ಎಂದು ತೋರಿಸಲು ಇತ್ತೀಚಿನ ಫೋಟೋಗಳನ್ನು ಹಾಜರು ಮಾಡುತ್ತೀರಾ ಎಂದು ಕೇಳಲಾದ ಪ್ರಶ್ನೆಗೆ ಸಾಕ್ಷಿಯು ಮಾಡುತ್ತೇವೆ ಎಂದು ನುಡಿದಿರುತ್ತಾರೆ.ನಾನು ವಿಪಿಸಿ ನಂ.544 ಕ್ಕೆ ಸಂಬಂಧಿಸಿದಂತೆ ದಾಖಲು ಮಾಡಿದ್ದ FDP ಯ ನಂಬರ ನನಗೆ ಗೊತ್ತಿಲ್ಲ. ನಾನು FDP No.33/2024 ರಂತೆ ನನ್ನ ಹಿಸ್ಸಾವನ್ನು ಪ್ರತ್ಯೇಕಿಸಿ ಕೊಡಲು ದಾಖಲು ಮಾಡಿದ್ದೆ ಎಂದರೆ ಸರಿ. ನಾನು ದಿಃ 12.06.2025 ರಂದು ನನಗೆ ಸದರಿ ದಾವೆಯನ್ನು ನಡೆಸಲು ಇಚ್ಛೆ ಇರುವುದಿಲ್ಲ ಎಂದು ಮೆಮೋ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ದಾವೆ ಇನ್ನೂ ಚಾಲ್ತಿಯಲ್ಲಿರುತ್ತದೆ ಎಂದು ನುಡಿದಿರುತ್ತಾರೆ. ದಿಃ 12.06.2025 ರಂದು ನಾನು ಸಲ್ಲಿಸಿದ ಮೆಮೋ ನ ಆಧಾರದ ಮೇಲೆ ಸದರಿ ದಾವೆಯು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಹಾಗೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.FDP No.33/2024 ರ ಮುದ್ದತ್ತಿನ ದಿನಾಂಕ ನನಗೆ ಗೊತ್ತಿಲ್ಲ. ನನಗೆ ವಿಪಿಸಿ ನಂ.544 ರಲ್ಲಿ ಹಿಸ್ಸಾ ಇರುತ್ತದೆ ಎನ್ನುವ ದಾವೆಯೇ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ವಿಪಿಸಿ ನಂ.544 ಶಿವಪ್ಪ ಮತ್ತು ಶಂಕ್ರಪ್ಪರವರ ಹೆಸರಿನಲ್ಲಿರುವುದರಿಂದ ಮತ್ತು ಸ್ವಾಧೀನದಲ್ಲಿ ಇರುವುದರಿಂದ ಸದರಿ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ವಿಪಿಸಿ ನಂ.543 ರಲ್ಲಿ ನನಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲದೇ ಇದ್ದರೂ ಸಹ ಪ್ರತಿವಾದಿಯವರಿಗೆ ತೊಂದರೆ ನೀಡಬೇಕೆನ್ನುವ ಉದ್ದೇಶದಿಂದ ಸುಳ್ಳು ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಿಪಿಸಿ ನಂ.543 ನನ್ನ ತಂದೆಯವರಿಗೆ ಸೇರಿದ್ದು ಎಂದು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರು ಮಾಡಿರುತ್ತೇನೆ.

ನಾನು ಸದರಿ ಆಸ್ತಿಯ ಉತಾರವನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ವಾದಿಯವರು ಹಾಜರುಪಡಿಸಿರುವ ದಾಖಲಾತಿಗಳನ್ನು ನೀಡಿ ಸದರಿ ದಾಖಲಾತಿಗಳಲ್ಲಿ ವಿಪಿಸಿ ನಂ.543 ಕ್ಕೆ ಸಂಬಂಧಿಸಿದಂತೆ ಯಾವ ದಾಖಲಾತಿ ನಿಮ್ಮ ತಂದೆಯವರಿಗೆ ಸೇರಿದ್ದು ಎಂದು ತೋರಿಸಿ ಎಂದು ಕೇಳಲಾದ ಪ್ರಶ್ನೆಗೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. FDP No.33/2024 ರಲ್ಲಿ ವಿಪಿಸಿ ನಂ.544 ರಲ್ಲಿ ಮಾತ್ರ ಹಿಸ್ಸಾ ಇತ್ತು ಎಂದು ದಾವೆಯನ್ನು ದಾಖಲು ಮಾಡಿದ್ದೆ ಎಂದರೆ ಸರಿ. ಹನಮಪ್ಪ ಹುಣಸಿಕಟ್ಟಿರವರು ನನ್ನ ತಂದೆ ಎಂದರೆ ಸರಿ.ನನ್ನ ತಂದೆಯವರಿಗೆ ನಾಗವ್ವ ಎನ್ನುವವರು ಒಂದನೇ ಹೆಂಡತಿ ಎಂದರೆ ಸರಿ. ನಾಗವ್ವ ಹುಣಸಿಕಟ್ಟಿರವರಿಗೆ ಇಬ್ಬರೂ ಹೆಣ್ಣು ಮಕ್ಕಳು ಎಂದರೆ ಸರಿ. ಅವರ ಹೆಸರು ಬಸವ್ವ ಮತ್ತು ಯಲ್ಲವ್ವ ಎಂದರೆ ಸರಿ. ಬಸವ್ವರವರಿಗೆ ನಿಂಗಪ್ಪ ಗುಡಿಮನಿರವರಿಗೆ ಕೊಟ್ಟು ಮದುವೆ ಮಾಡಿದ್ದರು ಎಂದರೆ ಸರಿ. ವಿಪಿಸಿ ನಂ.543 ನಿಂಗಪ್ಪ ಗುಡಿಮನಿರವರ ಆಸ್ತಿಯಾಗಿದ್ದರೂ ಸಹ ನನ್ನ ತಂದೆಯವರ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಪಿಸಿ ನಂ.543 ಆಸ್ತಿಯು ನಿಂಗಪ್ಪ ಗುಡಿಮನಿರವರು ಮರಣ ಹೊಂದಿದ ನಂತರ ಅವರ ಮಕ್ಕಳಾದ ಲಕ್ಕಪ್ಪ , ಪರಸಪ್ಪ ಮತ್ತು ಮುದಿಯಪ್ಪರವರ ಹೆಸರಿಗೆ ಬಂದಿರುವ ಆಸ್ತಿ ಆಗಿರುತ್ತದೆಯೇ ವಿನಃ ನನ್ನ ತಂದೆಯವರ ಆಸ್ತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 11-10-2004 ರಂದು ಲಕ್ಕಪ್ಪ , ಪರಸಪ್ಪ ಮತ್ತು ಮುದಿಯಪ್ಪರವರ ಹೆಸರಿಗೆ ಆಗಿರುತ್ತದೆ ಎಂದರೆ ಸಾಕ್ಷಿಯು ಈಗ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. 2004 ರಲ್ಲಿ ಪ್ರತಿವಾದಿಯವರು ವಿಪಿಸಿ ನಂ.543 ರಲ್ಲಿ ತಮ್ಮ ಹೆಸರನ್ನು ದಾಖಲು ಮಾಡಿಕೊಂಡ ನಂತರ ನಾವು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ.ನಾವು ದಾವಾ ನಂ.242/2018 ರಲ್ಲಿ ವಿಪಿಸಿ ನಂ.543 ಆಸ್ತಿಯನ್ನು ಸೇರಿಸಿ ಡಿಕ್ರಿಯನ್ನು ಪಡೆದುಕೊಂಡಿರುವುದಿಲ್ಲ. ನಾನು ಈ ದಾವೆಯನ್ನು ಪ್ರತಿವಾದಿಯವರು ಗೋಡೆಯನ್ನು ಸುಲಿದು ನನಗೆ ನಷ್ಟ ಪಡಿಸಿರುತ್ತಾರೆ ಎಂದು ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸಾಕ್ಷಿಯು ಇದನ್ನು ಮಾಡಿದ್ದೇನೆ ಮತ್ತು ಸದರಿ ಆಸ್ತಿಯು ನನ್ನ ತಂದೆಯವರದ್ದು ಎಂದು ಹೇಳಿ ಸಹ ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದು

ನುಡಿದಿರುತ್ತಾರೆ. ದಾವಾ ನಂ.242/2018 ನ್ನು ನಾನೇ ದಾಖಲು ಮಾಡಿರುತ್ತೇನೆ. ದಾವಾ ನಂ.242/2018 ನ್ನು ನನ್ನ ಸಹೋದರನಾದ ಶಂಕ್ರಪ್ಪನವರು ಮಾಡಿದ್ದರು ಎಂದರೆ ಸಾಕ್ಷಿಯು ನಾನೇ ಮಾಡಿದ್ದೆ ಎಂದು ನುಡಿದಿರುತ್ತಾರೆ. ಸದರಿ ದಾವೆಯನ್ನು ನಾನೇ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಂಕ್ರಪ್ಪರವರು ದಾವಾ ನಂ.242/2018 ರಲ್ಲಿ ಆದಂತಹ ಡಿಕ್ರಿಯ ಆಧಾರದ ಮೇಲೆ FDP ನ್ನು ದಾಖಲು ಮಾಡದ ಕಾರಣ ನಾನೇ ನನ್ನ ಹಿಸ್ಸಾವನ್ನು ಕೊಡಿಸಬೇಕೆಂದು FDP No.33/2024 ರಂತೆ ದಾಖಲು ಮಾಡಿದ್ದೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಒಂದನೆ ಹೆಂಡತಿಯ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ಸರಿ. ಬಸವ್ವ ಮತ್ತು ಯಲ್ಲವ್ವರವರ ಮಕ್ಕಳು ದಾವಾ ನಂ.242/2018 ತಮಗೆ ಬಂಧನಕಾರಿಯಾಗುವುದಿಲ್ಲ ಎಂದು ದಾವಾ ನಂ.9/2025 ರಂತೆ ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ನಂ.9/2025 ರಲ್ಲಿ ನಾವು ಹಾಜರು ಆಗಿದ್ದರೂ ಸಹ ದಾವೆ ಮಾಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ದಾವಾ ನಂ.9/2025 ರಲ್ಲಿ ನಮಗೆ ಸಮನ್ಸ ಜಾರಿ ಆದರೂ ಸಹ ನ್ಯಾಯಾಲಯಕ್ಕೆ ಹಾಜರಾಗದೇ ಏಕಪಕ್ಷೀಯವಾಗಿ ಉಳಿದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ನನ್ನ ಸಹೋದರರ ಒಪ್ಪಿಗೆಯನ್ನು ಪಡೆದುಕೊಂಡು ಗ್ರಾಮ ಪಂಚಾಯತಿಯವರಿಂದ ಪರವಾನಗಿಯನ್ನು ಪಡೆದುಕೊಂಡ ನಂತರ ಮನೆಯನ್ನು ಕಟ್ಟಿಕೊಂಡಿದ್ದರೂ ಸಹ ನಾನು ನನ್ನ ವಾದ ಪತ್ರದಲ್ಲಿ ಯಾವುದೇ ಪರವಾನಗಿಯನ್ನು ಪಡೆದುಕೊಳ್ಳದೇ ಕಾನೂನು ಬಾಹಿರವಾಗಿ ಮನೆಯನ್ನು ಕಟ್ಟಿಕೊಳ್ಳುತ್ತಿದ್ದಾರೆ ಎಂದು ಸುಳ್ಳು ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ತಾಲೂಕಾ ಪಂಚಾಯತಿಯಲ್ಲಿ ಗ್ರಾಮ ಪಂಚಾಯತಿಯವರು ಪರವಾನಗಿ ನೀಡಿರುವ ಬಗ್ಗೆ ಪ್ರಶ್ನೆ ಮಾಡಿರುತ್ತೇನೆ. ತಾಲೂಕಾ ಪಂಚಾಯತಿಯಲ್ಲಿ ಅಪೀಲು ಮಾಡಿರುವ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ತಾಲೂಕಾ ಪಂಚಾಯತಿಯಲ್ಲಿ ಯಾವುದೇ ಮೇಲ್ಮನವಿಯನ್ನು ಸಲ್ಲಿಸದೇ ಇದ್ದರೂ ಸಹ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ತಾಲೂಕ ಪಂಚಾಯತಿಯವರಲ್ಲಿ ಮೇಲ್ಮನವಿ ಮಾಡಿರುವ ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ಹಾಗೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**
ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.